# ಪೋಸ್ತಾಂ ಪರ್ಬು

**ಸ್ವಾಮಿ ಸುರೇಶಾನಂದ**

ಪರಿಪೂರ್ಣ ನೈತಿಕ ಮತ್ತು ಆಧ್ಯಾತ್ಮಿಕ ಜೀವನ ನಡೆಸುತ್ತಿರುವವರಿಗೆ ನರಕದ ಭಯವಿಲ್ಲ; ಬದಲಾಗಿ ಅವರು ನರಕವನ್ನೇ ಸ್ವರ್ಗವನ್ನಾಗಿ ಪರಿವರ್ತಿಸುವ ಸಾಮರ್ಥ್ಯವುಳ್ಳವರು ಎಂಬುದನ್ನು ಮಾರ್ಮಿಕವಾಗಿ ಈ ಕಥೆಯು ಸೂಚಿಸುತ್ತದೆ. ಇದನ್ನು ನಿರೂಪಿಸಿರುವ ಸ್ವಾಮಿ ಸುರೇಶಾನಂದಜಿಯವರು ಹಿಂದೆ ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದು ಈಗ ಬಿಳಿಗಿರಿರಂಗನ ಬೆಟ್ಟದಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ.

ಐರೋಪ್ಯ ದೇಶದ ಒಂದು ಹಳ್ಳಿಯಲ್ಲಿ ಒಬ್ಬ ಕ್ರಿಶ್ಚಿಯನ್ ಸಜ್ಜನನಿದ್ದ. ಬಹಳ ಕಷ್ಟಪಟ್ಟು ವ್ಯವಸಾಯ ಮಾಡಿ ಸಂತೃಪ್ತ ಜೀವನ ನಡೆಸುತ್ತಿದ್ದುದಲ್ಲದೆ, ಹಳ್ಳಿಯ ಇತರರನ್ನೂ ಹುರಿದುಂಬಿಸಿ, ಅವರೂ ಕಾಯಕದಿಂದ ತಮ್ಮ ಬದುಕನ್ನು ಉತ್ತಮಗೊಳಿಸಲು ತುಂಬ ನೆರವಾಗುತ್ತಿದ್ದ. ಅವನ ಖ್ಯಾತಿ ಊರಲ್ಲೆಲ್ಲ ಹರಡಿ ಊರಿನ ದೇವಾಲಯದ ಕ್ರೈಸ್ತ ಪಾದ್ರಿಯವರಿಗೂ ತಿಳಿಯಿತು. ದೇವಾಲಯದ ರಿಜಿಸ್ಟರ್‌ನಲ್ಲಿ ಪೋಸ್ತಾಂ ಪರ್ಬುವಿನ ಹೆಸರೇ ಇರಲಿಲ್ಲ. ಕಾರಣ ಆತ ಯಾವತ್ತೂ ಚರ್ಚಿಗೆ ಹೋದವನೇ ಅಲ್ಲ. ಪಾದ್ರಿಗಳು ಆತನಿಗೆ ಕರೆ ಕಳಿಸಿದರು. ಆತ ಬರಲೇ ಇಲ್ಲ. ಅವನ ಸಜ್ಜನಿಕೆಯಿಂದಾಗಿ ಪಾದ್ರಿಗಳೇ ಒಂದು ದಿನ ಅವನ ಮನೆಗೆ ಹೋದರು. ಅವನ ಸೇವಾಕಾರ್ಯವನ್ನು ಬಹಳ ಪ್ರಶಂಸೆ ಮಾಡಿ, ಭಾನುವಾರ ತಪ್ಪದೆ ದೇವಾಲಯಕ್ಕೆ ಬರುವಂತೆ ಅವರು ಹೇಳಿದರು. ಪೋಸ್ತಾಂ ಪರ್ಬು, "ಇಲ್ಲ ಪಾದ್ರಿಗಳೇ, ನನಗೆ ಅದರ ಅಗತ್ಯವಿಲ್ಲ" ಎಂದುಬಿಟ್ಟ. ಪಾದ್ರಿಗಳು ಮತ್ತೆ ಮತ್ತೆ ಕೇಳಿಕೊಂಡರೂ ಅವನು ಒಪ್ಪಲಿಲ್ಲ. ಕೊನೆಗೆ ಪಾದ್ರಿಗಳು, "ಹೋಗಲಿ ಬಿಡು, ಬೆಳಿಗ್ಗೆ ಮತ್ತು ಸಂಜೆ ಒಮ್ಮೆಯಾದರೂ ದೇವರ ಹೆಸರನ್ನು ಉಚ್ಚರಿಸು" ಎಂದು ಹೇಳಿದರು. ಅದೂ ತನಗೆ ಅಗತ್ಯವಿಲ್ಲ ಎಂದನು ಪೋಸ್ತಾಂ ಪರ್ಬು. ಇವನನ್ನು ಹೇಗಾದರೂ ಮಾಡಿ ನರಕವಾಸದಿಂದ ಪಾರುಮಾಡಬೇಕೆಂಬ ಪಾದ್ರಿಗಳ ಆಸೆ ಆಸೆಯಾಗಿಯೇ ಉಳಿಯಿತು. ತನ್ನ ಜೀವನದ ಕೊನೆಯವರೆಗೂ ಪೋಸ್ತಾಂ ಪರ್ಬು ಕಾಯಕ, ಸೇವೆಗಳನ್ನು ಬಿಡದೆ, ದೇವರ ಹೆಸರನ್ನು ಹೇಳದೆ ಕೊನೆಯುಸಿರೆಳೆದನು.

ಪಾದ್ರಿಗಳಿಗೂ ವಯಸ್ಸಾಯಿತು. ಅವರೂ ಒಂದು ದಿನ ದೇಹತ್ಯಾಗ ಮಾಡಿದರು. ಪರಿಶುದ್ಧ ಜೀವನ ನಡೆಸಿದ ಅವರಿಗೆ ಸ್ವರ್ಗ ಕಟ್ಟಿಟ್ಟ ಬುತ್ತಿ. ಯಾವ ಕೆಂಪು ಪಟ್ಟಿಯೂ ಇಲ್ಲದೆ ಅವರನ್ನು ನೇರ ಸ್ವರ್ಗಕ್ಕೆ ಕಳಿಸುವಂತೆ ಆಜ್ಞೆಯಾಯಿತು, ಸಂಬಂಧಪಟ್ಟ ಅಧಿಕಾರಿಗಳಿಂದ. ಆದರೆ ಪಾದ್ರಿಗಳಿಗೆ ಶಾಶ್ವತ ಸ್ವರ್ಗಪ್ರವೇಶಕ್ಕೆ ಮುನ್ನ ನರಕದಲ್ಲಿರುವ ಪೋಸ್ತಾಂ ಪರ್ಬುವನ್ನು ನೋಡಬೇಕು, ಅವನು ದೇವರ ಹೆಸರನ್ನು ಉಚ್ಚರಿಸುವಂತೆ ಮಾಡುವುದರ ಮೂಲಕ ಅವನನ್ನು ನರಕ ಯಾತನೆಯಿಂದ ರಕ್ಷಿಸಬೇಕು ಎಂಬ ತೀವ್ರ ಹಂಬಲ. ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳು, "ನೀವದನ್ನು ಸಹಿಸಲಾರಿರಿ, ಅದು ಮಹಾಪಾಪಿಗಳು ಅಸಾಧ್ಯ ಯಾತನೆಯನ್ನು ಅನುಭವಿಸುವ ಕತ್ತಲು ಕವಿದಿರುವ ಪ್ರದೇಶ; ನಿಮ್ಮಂತಹ ಸತ್ಪುರುಷರು ಅದನ್ನು ನೋಡಲಾರಿರಿ, ನೋಡಲೂ ಕೂಡದು" ಎಂದು ಹೇಳಿದರು. ಎಷ್ಟು ಕೇಳಿಕೊಂಡರೂ ಪಾದ್ರಿಗಳು ತಮ್ಮ ಹಠವನ್ನು ಬಿಡಲಿಲ್ಲ. ಕೊನೆಗೆ ಅಧಿಕಾರಿಗಳು ಅವರನ್ನು ನರಕದ ದರ್ಶನಕ್ಕೆ ಕೊಂಡೊಯ್ಯಬೇಕಾಯಿತು.

ಪಾದ್ರಿಗಳು ನರಕವನ್ನು ಪ್ರವೇಶಿಸುತ್ತಿದ್ದಂತೆಯೇ ಅಲ್ಲಿನ ಭೀಕರ ದೃಶ್ಯಗಳನ್ನು ನೋಡಿ ಅವರ ಮನಸ್ಸು ಕರಗಿತು. ಮುಂದೆ ಸಾಗುತ್ತಾ ಸಾಗುತ್ತಾ ದೃಶ್ಯ ಇನ್ನೂ ಭೀಕರವಾಗುತ್ತಾ ಹೋಯಿತು. ನರಕ ಯಾತನೆಯನ್ನು ಅನುಭವಿಸುತ್ತಿರುವವರ ಚೀತ್ಕಾರ ಬೊಬ್ಬೆಗಳು ಹೆಚ್ಚುತ್ತ ಹೋದವು. ಆದರೂ ಪೋಸ್ತಾಂ ಪರ್ಬುವಿನ ಸುಳಿವೇ ಇಲ್ಲ. ಜೊತೆಯಲ್ಲಿದ್ದ ಅಧಿಕಾರಿಗಳು, "ಮುಂದೆ ದೃಶ್ಯ ಇನ್ನೂ ಭೀಕರವಾಗುತ್ತಾ ಹೋಗುತ್ತದೆ; ನೀವು ಇಲ್ಲಿಂದ ದಯವಿಟ್ಟು ಹಿಂತಿರುಗಿ" ಎಂದು ಎಷ್ಟೇ ಕೇಳಿಕೊಂಡರೂ ಪಾದ್ರಿಗಳು ಮುಂದುವರಿಯುತ್ತಲೇ ಇದ್ದರು. ಹೇಗಾದರೂ ಮಾಡಿ ಪೋಸ್ತಾಂ ಪರ್ಬುವನ್ನು ಈ ನರಕ ಯಾತನೆಯಿಂದ ಪಾರುಮಾಡಬೇಕೆಂಬುದೊಂದೇ ಅವರ ಸಂಕಲ್ಪ.

ಮುಂದುವರಿದಂತೆ ಅಲ್ಲಿ ಇಲ್ಲಿ ಸ್ವಲ್ಪ ಬೆಳಕು ಕಾಣಲು ಪ್ರಾರಂಭವಾಯಿತು, ಚೀತ್ಕಾರ ಧ್ವನಿಯೂ ಕ್ಷೀಣಿಸುತ್ತ ಬಂತು. ಮರ, ಗಿಡ, ಬಳ್ಳಿಗಳು ಕಾಣಿಸತೊಡಗಿದವು. ಸಮೀಪಿಸಿದಂತೆ ಅವುಗಳೆಲ್ಲವೂ ಫಲಪುಷ್ಪಭರಿತವಾಗಿರುವುದು ಕಾಣಿಸಿತು. ಬೆಳಕು ಹೆಚ್ಚುತ್ತಾ ಹೋಯಿತು. ಇಡೀ ಪ್ರದೇಶವೇ ಪರಿಸರಮಾಲಿನ್ಯವಿಲ್ಲದೆ ಸಂಪದ್ಭರಿತವಾದ ಪ್ರದೇಶವಾಗಿ ಕಂಡಿತು. ಪಾದ್ರಿಗಳು, "ಏನು ನನ್ನನ್ನು ಮೋಸಪಡಿಸಿ ಕೊನೆಗೂ ಸ್ವರ್ಗಕ್ಕೇ ಕರೆತಂದಿರಾ" ಎಂದು ಉದ್ವೇಗದಿಂದ ಕೇಳಿದರು. "ಇಲ್ಲ, ಇದು ನರಕವೇ" ಎಂದು ಅಧಿಕಾರಿಗಳು ಹೇಳಿದರು. ಖಚಿತಪಡಿಸಿಕೊಳ್ಳಲು ಪಾದ್ರಿಗಳು ಸುತ್ತಮುತ್ತ ಕೆಲಸ ಮಾಡುತ್ತಿದ್ದ ಜನರನ್ನು ಕೇಳಿದಾಗ, ಅದು ನರಕವೇ ಎಂದು ತಿಳಿದುಬಂತು. ಇದು ಹೇಗಾಯಿತೆಂಬುದಕ್ಕೆ ಜನರು ವಿವರಣೆಯನ್ನು ನೀಡಿದರು: "ನಾವೂ ಎಲ್ಲರಂತೆ ನರಕಯಾತನೆಯನ್ನು ಅನುಭವಿಸುತ್ತಿದ್ದೆವು. ಕೊನೆಗೊಂದು ದಿನ ಪೋಸ್ತಾಂ ಪರ್ಬು ಎಂಬುವವನೊಬ್ಬನನ್ನು ಇಲ್ಲಿಗೆ ಕರೆತಂದರು. ಆತ ನಾವು ಹಸಿವು ಬಾಯಾರಿಕೆಗಳಿಂದ ನರಳುತ್ತಿರುವುದನ್ನು ನೋಡಿ, 'ಇದೇನು ಹೀಗೆ ಕೈಲಾಗದವರಂತೆ ಕಿರುಚಿಕೊಳ್ಳುತ್ತಿದ್ದೀರಿ? ಬನ್ನಿ ನನ್ನ ಜೊತೆ ಮೈಗೂಡಿಸಿ ಕೆಲಸ ಮಾಡಿ. ನರಕವನ್ನೇ ಸ್ವರ್ಗವಾಗಿಸೋಣ' ಎಂದು ತಾನೂ ಶ್ರಮಪಟ್ಟು, ನಮ್ಮಿಂದಲೂ ದುಡಿಸಿ ನರಕದ ಈ ಭಾಗವನ್ನು ಈ ಸ್ಥಿತಿಗೆ ತಂದಿರುವನು."

ಪಾದ್ರಿಗಳು ಈಗ ಪೋಸ್ತಾಂ ಪರ್ಬುವನ್ನು ನೋಡುವ ಕುತೂಹಲದಿಂದ ದಾಪುಗಾಲು ಹಾಕುತ್ತ ಮುನ್ನಡೆದರು. ನರಕವನ್ನೇ ಸ್ವರ್ಗವನ್ನಾಗಿ ಪರಿವರ್ತಿಸಿ ನೆಮ್ಮದಿಯಿಂದಿದ್ದ ಪರ್ಬುವನ್ನು ಬಹಳ ಪ್ರಶಂಸಿಸಿ, "ಈಗಲಾದರೂ ದೇವರ ಹೆಸರನ್ನು ಉಚ್ಚರಿಸು" ಎಂದು ಅಂಗಲಾಚಿ ಕೇಳಿಕೊಂಡರು. "ಇಲ್ಲ ಪಾದ್ರಿಗಳೆ, ನನಗದರ ಅವಶ್ಯಕತೆಯಿಲ್ಲ" ಎಂಬ ಹಳೆಯ ಉತ್ತರವೇ ಮತ್ತೆ ಬಂತು.